ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಪಕ್ಷದ ನಾಯಕರು ಚೀಫ್ ಇಂಜನಿಯರ್ ಅಥವಾ ನನ್ನ ಹತ್ತಿರ ಬಂದು ಆ ವಿಷಯಗಳನ್ನು ಹೇಳಲಿ. ಎರಡನೆಯ ವಿಚಾರವಾಗಿ ನೋಡಿದರೆ ಹೋದ ವರ್ಷ ತೆಗೆದುಕೊಂಡಂಥ ಕಾರ್ಯಗಳು ಅಷ್ಟುಮುಟ್ಟಿಗೆ ಹೆಚ್ಚಲ್ಲ. ಆ ಒಂದು ದೃಷ್ಟಿಯಿಂದ ಈ ವರ್ಷ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಆದೇಶವನ್ನು ನೀಡಿದ್ದೇವೆ.

STATE HIGHWAYS AND STATE FUND ROADS UNDER THE CONTROL OF P.W.D.

*Q.—321.—Sri G. RAME GOWDA (Doddaballapur).—

Will the Government be pleased to state :—

(*a*) the length of State Highways, State Fund Roads, and old District Board Roads under the control of the P.W.D. in Doddaballapur Taluk (separate figures in each case may be given) ;

(*b*) the asphalted mileage in each case ;

(*c*) when the full lengths in each would be asphalted ?

A.—Sri VEERENDRA PATIL (Minister for Public Works).—

		M	*F*
(*a*) (i)	State Highways	..	30—0
(ii)	State Fund Roads	..	68—0
(iii)	Old District Board Roads	..	14—2
(*b*) (i)	State Highways	..	22—3
(ii)	State Fund Roads	..	36—1
(iii)	Old District Board Roads	..	Nil

(*c*) As and when funds become available.

ಶ್ರೀ ಜಿ. ರಾಮೇಗೌಡ.—ಪಕ್ಕದ ಎರ್ಲಾ ತಾಲ್ಲೂಕುಗಳಲ್ಲೂ ಅಲ್ಲಿರಕಕ್ಕ ರಸ್ತೆಗಳು ಆಸ್ ಫಾರ್ಟ್ ಆಗಿರುವಾಗ ಈ ತಾಲ್ಲೂಕಿನಲ್ಲಿ 55 ಮೈಲಿ ಇನ್ನೂ ಆಗದೇ ಇರುವುದಕ್ಕೆ ಕಾರಣಗಳೇನು ;

†ಶ್ರೀ ವೀರೇಂದ್ರ ಪಾಟೀಲ್.—ಆ ತಾಲ್ಲೂಕಿನಲ್ಲಿ ಕೆಲವು ಕಡೆಗಳಲ್ಲಿ ಆಸ್‌ಫಾರ್ಟ್ ಮಾಡಿದ್ದಾರೆ. ಸ್ಟೇಟ್ ಹೈವೇಸ್ 30 ಮೈಲಿ, ಸ್ಟೇಟ್ ಫಂಡ್ ರೋಡ್ಸ್ 68 ಮೈಲಿಗಳು, 55 ಮೈಲಿ 4 ಫರ್ಲಾಂಗ್ ರಸ್ತೆಯನ್ನು ಆಸ್‌ಫಾರ್ಟ್ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಸ್ವಾತಂತ್ರ್ಯ ಬಂದು 18 ವರ್ಷಗಳಾದರೂ ಸರ್ಕಾರದ ಅಧೀನ ದಲ್ಲಿರತಕ್ಕ ರಸ್ತೆಗಳು ಆಸ್‌ಫಾರ್ಟ್ ಆಗದೇ ಇರುವುದು ಶೋಚನೀಯವಾಗಿದೆ. ಆದ್ದರಿಂದ ಅದನ್ನು ಈ ವರ್ಷ ಸರ್ಕಾರದವರು ಪೂರೈಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸ್ವಾತಂತ್ರ್ಯ ಬಂದನಂತರ ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಲಿಲ್ಲವೆನ್ನುವುದು ನಿಜವಲ್ಲ. ರಸ್ತೆಗಳನ್ನು ಆಸ್‌ಫಾರ್ಟ್ ಮಾಡುವ ವಿಷಯದಲ್ಲಿ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮಾನ್ಯ ಸದಸ್ಯರಿಗೆ ಬೇಕು ಎಂದರೆ ಅದರ ಮಾಹಿತಿ ಕೊಡುತ್ತೇನೆ. 1963-64, 1964-65 ಮತ್ತು 1965-66 ಹೀಗೆ ಈ ಮೂರು ವರ್ಷಗಳಲ್ಲಿಯೂ ಸುಮಾರು 14 ಮೈಲಿ 4 ಫರ್ಲಾಂಗ್ ದೂರದಷ್ಟು ರಸ್ತೆಗಳನ್ನು ಆಸ್‌ಫಾರ್ಟ್ ಮಾಡಿದ್ದಾರೆ. ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಸುಮಾರು 1,58,437 ರೂಪಾಯಿಗಳಷ್ಟು ಖರ್ಚುಮಾಡಿದ್ದಾರೆ. ಮೂರು ವರ್ಷಗಳಲ್ಲಿ ದೇಶಾದ್ಯಂತ 228 ಲಕ್ಷ ರೂಪಾಯಿಗಳನ್ನು ಆಸ್‌ಫಾಲ್ಟ್‌ಗಾಗಿ ಖರ್ಚುಮಾಡಬೇಕೆಂದಿದ್ದೇವೆ. ಈಗ ಅನೇಕ ತಾಲ್ಲೂಕುಗಳಲ್ಲಿ ಆಸ್‌ಫಾರ್ಟ್ ಕೆಲಸ ಆಗಿದೆ.

ಶ್ರೀ ಜಿ. ರಾಮೇಗೌಡ.—ಈ ಸಾಲಸರಾದರೂ ಅದನ್ನು ಪೂರೈಸಲಾಗುತ್ತದೆಂದು ಏನಾದರೂ ಭರವಸೆ ಕೊಡುತ್ತಾರೆಯೇ ?

ಶ್ರೀ ವೀರೇಂದ್ರಪಾಟೀಲ್.—ಎಲ್ಲಾ ರಸ್ತೆಗಳನ್ನು ಅಸ್‌ಫಾಲ್ಟ್ ಮಾಡುವುದಕ್ಕೆ ಒಂದೇ ವರ್ಷದಲ್ಲಿ ಸಾಧ್ಯವಾಗುವುದಿಲ್ಲ. ವರ್ಷೇ ವರ್ಷೇ ಮಾಡುತ್ತೇವೆ. ಈ ವರ್ಷ ಅಂದರೆ 66-67ನೇ ಸಾಲಿನಲ್ಲಿ ಇದಕ್ಕಾಗಿ 23 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಮಂಜೂರು ಮಾಡಿದ್ದಾರೆ. ರಸ್ತೆಗಳ ಅಸ್‌ಫಾಲ್ಟ್‌ಗಾಗಿ 20 ಸಾವಿರ ರೂಪಾಯಿಗಳನ್ನು ಕೂಡಲೇ ಖರ್ಚುಮಾಡಬೇಕೆಂದು ಬೆಂಗಳೂರಿನ ಜಿಲ್ಲಾಧಿಕಾರಿಗೆ ನಿರ್ದೇಶನವನ್ನು ಕೊಟ್ಟಿದೆ. ಆ ಪ್ರಕಾರ ಈಗಾಗಲೇ ಅಸ್‌ಫಾಲ್ಟ್ ಪ್ರೋಗ್ರಾಂ ಕಾರ್ಯ ಆ ತಾಲ್ಲೂಕಿನಲ್ಲಿ ನಡೆದಿದೆ.

CONSTRUCTION OF BRIDGE ACROSS THE HEMAVATHY.

*Q.—553. SRI S. SIVAPPA (Shravanabelagola).—

Will the Government be pleased to state :—

(*a*) whether any survey has been made regarding the construction of a bridge across the Hemavathy near Gannikada on the Channarayapatna-Holenarasipura Road ;

(*b*) what is the action taken by the Government so far regarding this Project ?

A.—SRI VEERENDRA PATIL (Minister for Public Works).—

(*a*) Yes.

(*b*) The plans and estimates are under preparation in the Department.

Sri S. SIVAPPA.—In answer to (*b*) it is stated that the plans and estimates are under preparation in the department. May I know the action teken by Government on the estimates and plans prepared for the construction of a bridge over Hemavathi near Gannikada ?

†ಶ್ರೀ ವೀರೇಂದ್ರಪಾಟೀಲ್.—ಹೇಮಾವತಿ ನದಿಗೆ ಅಡ್ಡಲಾಗಿ ಸೇತುವೆಯನ್ನು ಎಲ್ಲಿ ಕಟ್ಟಬೇಕು ಎನ್ನುವುದಕ್ಕೆ ಮೂರು ಸ್ಥಳಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಒಂದು ಗನ್ನಿಕಡ, ಇನ್ನೊಂದು ಗೊಂಡಿಹಳ್ಳಿ, ಮತ್ತೊಂದು ಕಡೆ ಹೊಮ್ಮಿಗೆ ಈ ಮೂರು ಜಾಗಗಳ ಪೈಕಿ ಯಾವ ಜಾಗದಲ್ಲಿ ಅತಿ ಕಡಮೆ ಖರ್ಚಿನಲ್ಲಿ ಅದು ಆಗುತ್ತದೆಯೋ ಆ ಕಡೆಯಲ್ಲಿ ಸೇತುವೆಯನ್ನು ಕಟ್ಟಬೇಕೆಂದು ವಿಚಾರಮಾಡುತ್ತಿದ್ದಾರೆ. ಈ ಮೂರು ಜಾಗಗಳ ಪ್ಲಾನು ಮತ್ತು ಎಸ್ಟಿಮೇಟುಗಳ ಪೈಕಿ ಯಾವುದು ಕಡಮೆ ಖರ್ಚಿನಲ್ಲಿ ಆಗುತ್ತದೋ ಅದನ್ನು ಶಿಫಾರ್ಸುಮಾಡಿ ಕಳುಹಿಸಬೇಕೆಂದು ಹೇಳಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಮೂರು ಜಾಗಗಳನ್ನು ಅವರೇ ಪರಿಶೀಲನೆ ಮಾಡಿ ಇರಾಖೆ ಅಧಿಕಾರಿಗಳಿಗೆ ಕೊಟ್ಟಂತಹ ಒಂದು ನಿರ್ದೇಶನದ ಮೇಲೆ ಎಸ್ಟಿಮೇಟು ಮತ್ತು ಪ್ಲಾನ್ ತಯಾರಾಗುತ್ತಿರುವಾಗ ಅದು ಇರಾಖೆಯಲ್ಲಿ ಕೆಲವು ಹಂತಗಳಲ್ಲಿ ಸ್ಕ್ರುಟಿನಿ ಆಗುತ್ತಿರುವುದು ಸರ್ಕಾರಕ್ಕೆ ಗೊತ್ತಾಗಿರುವಾಗ ಈ ವರ್ಷವೇ ಆ ಕೆಲಸವನ್ನು ತೆಗೆದುಕೊಳ್ಳುವ ಒಂದು ಆಶ್ವಾಸನೆಯನ್ನು ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ವೀರೇಂದ್ರಪಾಟೀಲ್.—ಆ ಕೆಲಸ ಎಷ್ಟು ಮಹತ್ವದ್ದಿದೆಯೆಂದು ನಾನೇ ಮಾನ್ಯ ಸದಸ್ಯರ ಜೊತೆಯಲ್ಲಿ ಹೋಗಿ ನೋಡಿದ್ದೇನೆ. ಈಗ ಸೆಲೆಕ್ಟ್ ಮಾಡತಕ್ಕ ಜಾಗದ ಬಗ್ಗೆ ಅಷ್ಟು ತಕರಾರು ಮಾಡದೇ ಇರುವ ಹಾಗೆ ಇದೆ. ಆದ್ದರಿಂದ ಈ ವರ್ಷ ಆ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದೆಂದು ನನಗನ್ನಿಸುತ್ತದೆ.